ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ (11)ರ ಉಪ ನಿಯಮ (2)ರ ಪ್ರಕಾರ ಸರ್ಕಾರಿ ನೌಕರರ ವಿರುದ್ಧ ದುರ್ನಡತೆ ಅಥವಾ ದುರ್ವರ್ತನೆಯ ಆರೋಪದ ಸತ್ಯಾಂಶವನ್ನು ವಿಚಾರಣೆ ಮಾಡುವ ಬಗ್ಗೆ ಆಧಾರಗಳು ಇವೆಯೆಂದು ಅಭಿಪ್ರಾಯ ಪಟ್ಟರೆ ಸಕ್ಷಮ ಶಿಸ್ತು ಪ್ರಾಧಿಕಾರಿಯನ್ನು ಈ ನಿಯಮದ ಮೇರೆಗೆ ನೇಮಕ ಮಾಡಬಹುದು. ಸದರಿ ನಿಯಮಗಳಡಿಯಲ್ಲಿ ಮಾಡುವ ಇಲಾಖಾ ವಿಚಾರಣೆಗಳಲ್ಲಿ ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲು ದಿನಾಂಕ: 24-04-98ರ ಆದೇಶದಲ್ಲಿ (ಉಲ್ಲೇಖ-1) ಆಸ್ಪದ ಕಲ್ಪಿಸಲಾಗಿದೆ. ಇಲಾಖಾ ವಿಚಾರಣೆಗಳಲ್ಲಿ ವಿಚಾರಣಾ ಪ್ರಾಧಿಕಾರಗಳನ್ನಾಗಿ ನೇಮಿಸಬಹುದಾದ ನಿವೃತ್ತ ನ್ಯಾಯಾಧೀಶರುಗಳ ಪಟ್ಟಿಯನ್ನು ಕಾನೂನು ಇಲಾಖೆಯು ದಿನಾಂಕ: 08-03-99ರ ಅನಧಿಕೃತ ಟಿಪ್ಪಣಿಯಲ್ಲಿ (ಉಲ್ಲೇಖ-2) ತಿಳಿಸಿರುತ್ತದೆ ಹಾಗೂ ಅದನ್ನು ಕಾಲಕಾಲಕ್ಕೆ ಪರಿಷ್ಕರಿಸಲಾಗಿದೆ.

2. ಸರ್ಕಾರಿ ನೌಕರರ ವಿರುದ್ಧ ನಡೆಸುವ ಇಲಾಖಾ ವಿಚಾರಣೆಗಳನ್ನು ತ್ವರಿತವಾಗಿ ವಿಲೇ ಮಾಡುವ ಉದ್ದೇಶದಿಂದ ಇಲಾಖೆಯ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಿಸುವ ವಾಡಿಕೆಯನ್ನು ತಪ್ಪಿಸಿ, ಅವುಗಳನ್ನು ನಿವೃತ್ತ ನ್ಯಾಯಾಧೀಶರುಗಳಿಗೆ ವಹಿಸುವಂತೆ ಸೂಚಿಸಲಾಗಿದೆ.

3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಈ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕೆಂದೂ ಹಾಗೂ ಅವರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಿಸ್ತು ಪ್ರಾಧಿಕಾರಗಳ ಗಮನಕ್ಕೆ ಇದನ್ನು ತರಬೇಕೆಂದು ಸೂಚಿಸಿದೆ.

**ಪಿ.ಮಾರ್ಕಂಡೇಯ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಇಲಾಖಾ ವಿಚಾರಣೆಗಳಿಗೆ ವಿಚಾರಣಾಧಿಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ನ್ಯಾಯಾಧೀಶರಿಗೆ ನೀಡಲಾಗುತ್ತಿರುವ ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ.

**ಉಲ್ಲೇಖ**

1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 3 ಸೇಇವಿ 96, ದಿನಾಂಕ: 24-04-1998
2. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 45 ಸೇಇವಿ 2001, ದಿನಾಂಕ: 04-03-2002
3. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 16 ಸೇಇವಿ 2005, ದಿನಾಂಕ; 23-08-2005
4. ಕಾರ್ಯದರ್ಶಿ, ದಿ ಕರ್ನಾಟಕ ರಿಟೈರ್ಡ್ ಜ್ಯುಡಿಷಿಯಲ್ ಆಫೀಸರ್ಸ ಅಸೋಸಿಯೇಷನ್, ಬೆಂಗಳೂರು ಇವರ ದಿನಾಂಕ: 13-05-2007 ರ ಮನವಿ.

*****

**ಪ್ರಸ್ತಾವನೆ:**

ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಸರ್ಕಾರಿ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳಾಗಿ, ಮೇಲೆ (1) ರಲ್ಲಿ ಓದಲಾದ ದಿನಾಂಕ: 24-04-1998ರ ಸರ್ಕಾರಿ ಆದೇಶದನ್ವಯ ನೇಮಿಸಿಕೊಳ್ಳಬಹುದಾಗಿದೆ. ಈ ರೀತಿ ನೇಮಕಗೊಂಡ ವಿಚಾರಣಾಧಿಕಾರಿಗಳಿಗೆ ಸದರಿ ಆದೇಶದ ಕಂಡಿಕೆ 4(ಒ)ರಲ್ಲಿ ತಿಳಿಸಿದಂತೆ ರೂ. 5,000/-ಹಂಚಿತ ಸಂಭಾವನೆಯನ್ನು ನಿಗಧಿಪಡಿಸಿದ್ದು, ಈ ಸಂಭಾವನೆಯನ್ನು ಮೇಲೆ ಉಲ್ಲೇಖ (3) ರಲ್ಲಿ ಓದಲಾದ ದಿನಾಂಕ: 23-08-2005ರ ಸರ್ಕಾರಿ ಆದೇಶದಲ್ಲಿ ರೂ.6,000/- ಕ್ಕೆ ಹೆಚ್ಚಿಸಲಾಗಿದೆ. ಇವರಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ಪ್ರತಿ ವಿಚಾರಣೆಗೆ ರೂ.1000/-ವಾಹನ ಭತ್ಯೆಯನ್ನು ನಿಗದಿಪಡಿಸಲಾಗಿದೆ.

ಕಾರ್ಯದರ್ಶಿ, ದಿ ಕರ್ನಾಟಕ ರಿಟೈರ್ಡ್ ಜ್ಯುಡಿಷಿಯಲ್ ಆಫೀಸರ್ಸ್ ಅಸೋಸಿಯೇಷನ್, ಬೆಂಗಳೂರು ರವರು ದಿನಾಂಕ: 13-05-2007 ರಂದು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ (ಕ್ರಮ ಸಂಖ್ಯೆ 4ರಲ್ಲಿ ಓದಲಾಗಿದೆ) ವಿಚಾರಣಾಧಿಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ನ್ಯಾಯಾಧೀಶರಿಗೆ ಪ್ರತಿ ವಿಚಾರಣೆಗೆ ನಿಗಧಿಪಡಿಸಿರುವ ಸಂಭಾವನೆಯನ್ನು ಹಾಗೂ ಪ್ರಯಾಣ ಭತ್ಯೆಯನ್ನು ಹೆಚ್ಚಿಸುವಂತೆ ಕೋರಿರುತ್ತಾರೆ. ಈ ವಿಷಯವನ್ನು ಸರ್ಕಾರವು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ:-

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 2007, ಬೆಂಗಳೂರು, ದಿನಾಂಕ: 11-04-2008**

ದಿನಾಂಕ: 24-04-1998 ರ ಆದೇಶ ಸಂಖ್ಯೆ: ಸಿಆಸುಇ 3 ಸೇಇವಿ 1996ರ ಕಂಡಿಕೆ 4(ಒ) ರಂತೆ ವಿಚಾರಣಾಧಿಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ನ್ಯಾಯಾಧೀಶರಿಗೆ ನೀಡಬಹುದಾದ ಸಂಭಾವನೆಯನ್ನು ಪ್ರಕರಣವೊಂದಕ್ಕೆ ರೂ.6,000/- ರಿಂದ ರೂ.8,000/- ( ಎಂಟು ಸಾವಿರ)ಗಳಿಗೆ ಹಾಗೂ ವಾಹನ ಭತ್ಯೆಯನ್ನು ರೂ. 1,000/- ಗಳಿಂದ ರೂ. 1,500/- (ಒಂದು ಸಾವಿರದ ಐದುನೂರು) ಗಳಿಗೆ ತತಕ್ಷಣದಿಂದ ಜಾರಿಗೆ ಬರುವಂತೆ ಹೆಚ್ಚಿಸಲು ಮಂಜೂರಾತಿ ನೀಡಲಾಗಿದೆ.

ಆರ್ಥಿಕ ಇಲಾಖೆಯು ದಿನಾಂಕ: 14-02-2008ರ ಟಿಪ್ಪಣಿ ಸಂಖ್ಯೆ: ಆಇ 2536 ವೆಚ್ಚ-05/2007ರಲ್ಲಿ ನೀಡಿದ ಸಹಮತಿಯನ್ವಯ ಇದನ್ನು ಹೊರಡಿಸಲಾಗಿದೆ.

**ಪಿ.ಮಾರ್ಕಂಡೇಯ**

ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 1 ಸೇಇವಿ 2009

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 15-05-2009

**ಸುತ್ತೋಲೆ**

ವಿಷಯ: ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ವಹಿಸುವ ಬಗ್ಗೆ

ಉಲ್ಲೇಖ:

1. ದಿನಾಂಕ: 24-04-1998ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 3 ಸೇಇವಿ 96
2. ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ದಿನಾಂಕ: 29-03-2008ರ ಸುತ್ತೋಲೆ ಸಂಖ್ಯೆ: ಲಾ 40 ಎಲ್ಎಂ2007
3. ದಿನಾಂಕ: 03-03-2008ರ ಸುತ್ತೋಲೆ ಸಂಖ್ಯೆ: ಸಿಆಸುಇ 2 ಸೇಇವಿ 2008.

****

ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಸರ್ಕಾರಿ ನೌಕರರ ವಿರುದ್ಧ ನಡೆಸುವ ಇಲಾಖಾ ವಿಚಾರಣೆಗಳಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳಾಗಿ ನೇಮಿಸಿಕೊಳ್ಳಲು ಉಲ್ಲೇಖ(1)ರಲ್ಲಿ ತಿಳಿಸಿದ ಸರ್ಕಾರಿ ಆದೇಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಈ ಆದೇಶದನ್ವಯ ವಿಚಾರಣಾಧಿಕಾರಿಗಳಾಗಿ ನೇಮಿಸಿಕೊಳ್ಳಬಹುದಾದ ನಿವೃತ್ತ ನ್ಯಾಯಾಧೀಶರ ಪಟ್ಟಿಯನ್ನು ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ದಿನಾಂಕ: 29-03-2008ರ ಉಲ್ಲೇಖ(2)ರಲ್ಲಿನ ಸುತ್ತೋಲೆಯಲ್ಲಿ ಹೊರಡಿಸಿದೆ.

2. ಸರ್ಕಾರಿ ನೌಕರರ ವಿರುದ್ಧ ನಡೆಸುವ ಇಲಾಖಾ ವಿಚಾರಣೆಗಳನ್ನು ತ್ವರಿತವಾಗಿ ವಿಲೇ ಮಾಡುವ ಉದ್ದೇಶದಿಂದ ಇಲಾಖೆಯ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಿಸುವ ವಾಡಿಕೆಯನ್ನು ತಪ್ಪಿಸಿ, ಅವುಗಳನ್ನು ನಿವೃತ್ತ ನ್ಯಾಯಾಧೀಶರುಗಳಿಗೆ ವಹಿಸುವಂತೆ ಸೂಚಿಸಲಾಗಿದೆ (ಉಲ್ಲೇಖ-3). ಇದರಿಂದಾಗಿ ಇಲಾಖಾಧಿಕಾರಿಗಳನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಬಾರದೆ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೋರಲಾಗಿದೆ. ಇಲಾಖಾಧಿಕಾರಿಗಳನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಿದಲ್ಲಿ ಅವರು ತಮ್ಮ ದೈನಂದಿನ ಕಛೇರಿ ಕಾರ್ಯದಲ್ಲಿ ಇಲಾಖಾ ವಿಚಾರಣೆಗೆ ಗಮನ ಕೊಡುವುದು ಕಠಿಣವಾಗುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಮಟ್ಟಿಗೆ ಇಲಾಖಾಧಿಕಾರಿಗಳನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡುವುದನ್ನು ತಪ್ಪಿಸಿದಲ್ಲಿ ವಿಚಾರಣೆಗಳಲ್ಲಿ ವಿಳಂಬವನ್ನು ತಪ್ಪಿಸಬಹುದೆಂಬುದು ಸದರಿ ಸುತ್ತೋಲೆಯ ಉದ್ದೇಶವಾಗಿರುತ್ತದೆ. ಇಲಾಖಾಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂಬುದು ಈ ಸುತ್ತೋಲೆಯ ಉದ್ದೇಶವಾಗಿರುವುದಿಲ್ಲ. ಆದ್ದರಿಂದ ಪ್ರಕರಣಗಳ ತೀವ್ರತೆಯನ್ನು ಪರಿಗಣನೆಗೆ ತೆಗೆದುಕೊಂಡು ಇಲಾಖಾ ವಿಚಾರಣೆಗಳಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ಅಥವಾ ಇಲಾಖಾಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಬಹುದಾಗಿದೆಯೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಈ ಸೂಚನೆಗಳನ್ನು ಅವರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಿಸ್ತು ಪ್ರಾಧಿಕಾರಗಳ ಗಮನಕ್ಕೆ ತರಬೇಕೆಂದು ಸೂಚಿಸಿದೆ.

**ಪಿ.ಮಾರ್ಕಂಡೇಯ**
ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

# ಸರ್ಕಾರದ ಪ್ರಧಾನ /ಕಾರ್ಯದರ್ಶಿಇಲಾಖೆ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** ಇಲಾಖಾ ವಿಚಾರಣೆಗಳಲ್ಲಿ ವಿಚಾರಣಾಧಿಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ, ಮಂಡನಾಧಿಕಾರಿಗೆ/ಸಾಕ್ಷ್ಯ ಹೇಳುವ ಖಾಸಗಿ ವ್ಯಕ್ತಿಗಳಿಗೆ ನೀಡಲಾಗುತ್ತಿರುವ ವಿವಿಧ ಸಂಭಾವನೆ/ಭತ್ಯೆಗಳ ಪರಿಷ್ಕರಣೆ ಬಗ್ಗೆ.

**ಸರ್ಕಾರ ಆದೇಶ ಸಂಖ್ಯೆ: ಸಿಆಸುಇ 6 ಸೇಇವಿ 2010, ಬೆಂಗಳೂರು, ದಿನಾಂಕ: 28-04-2011.**

**ಓದಲಾಗಿದೆ**

1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 3 ಸೇಇವಿ 1996, ದಿನಾಂಕ: 24-04-1998.
2. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 15 ಸೇಇವಿ 1999, ದಿನಾಂಕ: 14-03-2000.
3. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 2007, ದಿನಾಂಕ: 11-04-2008.
4. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 06 ಸೇಇವಿ 2010, ದಿನಾಂಕ: 08-02-2010.

**ಪ್ರಸ್ತಾವನೆ:**

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಸರ್ಕಾರಿ ನೌಕರರ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಗಳನ್ನು ತ್ವರಿತವಾಗಿ ಪೂಣಗೊಳ್ಳಲು ಮಾರ್ಗೋಪಾಯಗಳನ್ನು ಸೂಚಿಸಲು ಸರ್ಕಾರವು ಮೇಲೆ (4)ರಲ್ಲಿ ಓದಲಾದ ದಿನಾಂಕ:08-02-2010 ರ ಆದೇಶದಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಿರುತ್ತಾರೆ. ಈ ಸಮಿತಿಯು ಅಧ್ಯಯನ ನಡೆಸಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಕೆಲವು ಶಿಫಾರಸ್ಸುಗಳನ್ನು ಮಾಡಿರುತ್ತದೆ. ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಪ್ರಸ್ತುತ ನೀಡುತ್ತಿರುವ ವಿವಿಧ ಸಂಭಾವನೆಗಳು ಮತ್ತು ವಾಹನ ಭತ್ಯೆ ಮಂಡನಾಧಿಕಾರಿಗೆ ನೀಡುವ ಸಂಭಾವನೆ ಹಾಗೂ ಖಾಸಗಿ ವ್ಯಕ್ತಿಗಳ ಇಲಾಖಾ ವಿಚಾರಣೆಯಲ್ಲಿ ಸಾಕ್ಷ್ಯ ಹೇಳಲು ಹಾಜರಾದಲ್ಲಿ ಅವರಿಗೆ ನೀಡುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಇವುಗಳನ್ನು ಪರಿಷ್ಕರಿಸುವುದು ಸದರಿ ಸಮಿತಿಯು ಶಿಫಾರಸ್ಸುಗಳಾಗಿರುತ್ತದೆ.

ಮೇಲೆ (1)ರಲ್ಲಿ ಓದಲಾದ ದಿನಾಂಕ: 24-04-1998ರ ಆದೇಶದ್ದಲ್ಲಿ ಇಲಾಖಾ ವಿಚಾರಣೆಯಲ್ಲಿ ದೋಷಾರೋಪಣಾ ಪಟ್ಟಿಯನ್ನು ತಯಾರಿಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಪ್ರತಿ ಪ್ರಕರಣಕ್ಕೆ ರೂ.1000/-ಸಂಭಾವನೆಯನ್ನು ನಿಗಧಿಗೊಳಿಸಲಾಗಿದೆ. ದಿನಾಂಕ: 11-04-2008ರ ಆದೇಶದ ಪ್ರಕಾರ (ಕ್ರ.ಸಂ.3ರಲ್ಲಿ ಓದಲಾಗಿದೆ) ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಪ್ರತಿ ವಿಚಾರಣೆಗೆ ರೂ.8000/- ಸಂಭಾವನೆಯನ್ನು ಮತ್ತು ರೂ.1500/- ವಾಹನ ಭತ್ಯೆಯನ್ನು ಮಂಜೂರು ಮಾಡಲಾಗಿದೆ. ಇಲಾಖಾ ವಿಚಾರಣೆಯಲ್ಲಿ ಮಂಡನಾಧಿಕಾರಿಯಾಗಿ ನೇಮಕವಾಗಿರುವವರಿಗೆ ವಿಚಾರಣೆಯ ದಿನವೊಂದಕ್ಕೆ ಅವರ ಮೂಲಕ ವೇತನ ಶೇ.10 ರಷ್ಟು ಆದರೆ ಕನಿಷ್ಟ ರೂ.50/- ಮತ್ತು ಗರಿಷ್ಟ ರೂ. 100/-ಗಳ ಮಿತಿಗೊಳಪಟ್ಟು ಸಂಬಾವನೆ ನೀಡಲು ಮೇಲೆ (2)ರಲ್ಲಿ ಓದಲಾದ ದಿನಾಂಕ: 14-03-2000ರ ಆದೇಶದಲ್ಲಿ ನಿಗಧಿಪಡಿಸಲಾಗಿದೆ. ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 569 'ಎ'ನಲ್ಲಿ 1999 ರಿಂದ ಇರುವ ಅವಕಾಶದಂತೆ ಪರಸ್ಥಳದಲ್ಲಿರುವ ಖಾಸಗಿ ವ್ಯಕ್ತಿಗಳ ಇಲಾಖಾ

ವಿಚಾರಣೆಯಲ್ಲಿ ಸಾಕ್ಷ್ಯ ಹೇಳಲು ಹಾಜರಾದಲ್ಲಿ ಅವರಿಗೆ ರೈಲ್ವೆ ಪ್ರಯಾಣದ ಎರಡನೇ ದರ್ಜೆಯ ದರ ಅಥವಾ ಬಸ್ ದರ ಹಾಗೂ ದಿನಭತ್ಯೆ ರೂ.50/ ರಿಂದ 60/-ನ್ನು (ಬೆಂಗಳೂರಿನಲ್ಲಿ ರೂ.60/- ಮುನಿಸಿಪಲ್ ಕಾರ್ಪೊರೇಷನ್ ಹೊಂದಿರುವ ಸ್ಥಳಗಳಲ್ಲಿ ರೂ.55/- ಮತ್ತು ಇತರೆ ಸ್ಥಳಗಳಲ್ಲಿ ರೂ.50/-)ನೀಡಲು ಅವಕಾಶವಿರುತ್ತದೆ.

ಇಲಾಖಾ ವಿಚಾರಣೆಗಳನ್ನು ಪೂರ್ಣಗೊಳಿಸಲು ಆಗುತ್ತಿರುವ ವಿಳಂಬವನ್ನು ನಿವಾರಿಸಲು ಅಧಿಕಾರಿಗಳ ಸಮಿತಿಯು ಶಿಫಾರಸ್ಸು ಮಾಡಿರುವ ಮಾರ್ಗೋಪಾಯಗಳಲ್ಲಿ ಮೇಲ್ಕಂಡ ಸಂಭಾವನೆಗಳನ್ನು ಮತ್ತು ಭತ್ಯೆಗಳನ್ನು ಪರಿಷ್ಕರಿಸಲು ಸದರಿ ಸಮಿತಿಯು ಮಾಡಿರುವ ಶಿಫಾರಸ್ಸು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರಡಿಯಲ್ಲಿ ಮಾಡುವ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಯಾಗಿ ನೇಮಕವಾಗಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಮತ್ತು ಮಂಡನಾಧಿಕಾರಿಗಳಿಗೆ ಕೆಳಕಂಡಂತೆ ಸಂಭಾವನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೀಡಲು ಮಂಜೂರಾತಿ ನೀಡಲಾಗಿದೆ:-

1. ದೋಷಾರೋಪಣಾ ಪಟ್ಟಿಯನ್ನು ತಯಾರಿಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಪ್ರತಿ ಪ್ರಕರಣಕ್ಕೆ ರೂ.3000/-( ಮೂರು ಸಾವಿರ ರೂಪಾಯಿಗಳು) ಸಂಭಾವನೆ.
2. ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಪ್ರತಿ ವಿಚಾರಣೆಗೆ ರೂ.15,000/-(ಹದಿನೈದು ಸಾವಿರ ರೂಪಾಯಿಗಳು) ಸಂಭಾವನೆ (ವಾಹನ ಭತ್ಯೆಯೂ ಸೇರಿರುತ್ತದೆ).
3. ಮಂಡನಾಧಿಕಾರಿಗೆ ವಿಚಾರಣೆಯ ದಿನವೊಂದಕ್ಕೆ ರೂ.400/- (ನಾಲ್ಕು ನೂರು ರೂಪಾಯಿಗಳು) ಸಂಭಾವನೆ.

3. ಮೇಲ್ಕಂಡ ದರಗಳು ಇನ್ನು ಮುಂದೆ ವಿಚಾರಣಾಧಿಕಾರಿ ಅಥವಾ ಮಂಡನಾಧಿಕಾರಿಯಾಗಿ ನೇಮಕವಾಗುವವರೆಗೆ ಮಾತ್ರ ಅನ್ವಯವಾಗುತ್ತದೆ.

3. ಇಲಾಖಾ ವಿಚಾರಣೆಗಳಲ್ಲಿ ಸಾಕ್ಷಿ ಹೇಳಲು ಹಾಜರಾಗುವ ಖಾಸಗಿ ವ್ಯಕ್ತಿಗಳಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 569ಎ ಅನ್ವಯ ಪಾವತಿಸಲಾಗುವುದು.

4. ಆರ್ಥಿಕ ಇಲಾಖೆಯ ದಿನಾಂಕ: 28-01-2011ರ ಟಿಪ್ಪಣಿ ಸಂಖ್ಯೆ: ಆಇ 1828 ಸೇ-1/2010ರಲ್ಲಿ ನೀಡಿದ ಸಹಮತಿಯನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಪಿ.ಮಾರ್ಕಂಡೇಯ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 26 ಸೇಇವಿ 2011

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 26-07-2011.

## ಸುತ್ತೋಲೆ

**ವಿಷಯ:** ಇಲಾಖಾ ವಿಚಾರಣೆಯನ್ನು ನಡೆಸಲು ನಿವೃತ್ತ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸುವ ಕುರಿತು.

**ಉಲ್ಲೇಖ;** ದಿನಾಂಕ: 24-04-1998ರ ಸರ್ಕಾರಿ ಆದೇಶದ ಸಂಖ್ಯೆ: ಸಿಆಸುಇ 03 ಸೇಇವಿ 96

*******

ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರಡಿಯಲ್ಲಿ ಮಾಡುವ ಇಲಾಖಾ ವಿಚಾರಣೆಗಳನ್ನು ನಿವೃತ್ತ ನ್ಯಾಯಾಧೀಶರು ಹಾಗೂ ನಿವೃತ್ತ ಸರ್ಕಾರದ ಅಧಿಕಾರಿಗಳಿಗೆ ವಹಿಸುವ ಬಗ್ಗೆ ಉಲ್ಲೇಖಿತ ದಿನಾಂಕ:24-04-1998ರ ಸರ್ಕಾರಿ ಆದೇಶದಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿದೆ. ಸದರಿ ಆದೇಶದನ್ವಯ ಇಲಾಖಾ ವಿಚಾರಣೆಗಳನ್ನು ನಡೆಸಲು ನಿವೃತ್ತ ನ್ಯಾಯಾಧೀಶರ ವ್ಯಾಪಕ ಪಟ್ಟಿಯನ್ನು (Master Panal) ಕಾನೂನು ಇಲಾಖೆಯು ಅಗಿಂದಾಗ್ಗೆ ಪ್ರಕಟಿಸುತ್ತಿದೆ. ಈ ಆದೇಶದಂತೆ ಇಲಾಖಾ ವಿಚಾರಣೆಗಳನ್ನು ನಡೆಸಲು ಸಲುವಾಗಿ ಪ್ರಾವೀಣ್ಯತೆ ಹಾಗೂ ಪ್ರಮಾಣಿಕತೆಯುಳ್ಳ ನಿವೃತ್ತ ಅಧಿಕಾರಿಗಳನ್ನು ಗುರುತಿಸಿ ಅಂತಹವರ ಪಟ್ಟಿಯನ್ನು ಸಹ ಪ್ರಕಟಿಸಲು ನಿರ್ಧರಿಸಲಾಗಿದೆ.

2. ಮೇಲೆ ತಿಳಿಸಿರುವ ದಿನಾಂಕ:24-04-1998ರ ಸರ್ಕಾರಿ ಆದೇಶದ ಕಂಡಿಕೆ 4ರಲ್ಲಿರುವ ಸೂಚನೆಗಳಲ್ಲಿನ ಕ್ರಮ ಸಂಖ್ಯೆ(ಇ) ಮತ್ತು (ಈ) ಈ ಕೆಳಕಂಡಂತೆ ಪುನರುಚ್ಚರಿಸಿದೆ:-

> " (ಇ) ನಿವೃತ್ತ ಅಧಿಕಾರಿಗಳಿಗೆ ಸಂಬಂಧಿಸಿದಂತೆ, ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಪಟ್ಟಿಯನ್ನು ತಯಾರಿಸತಕ್ಕದ್ದು. ಈ ಉದ್ದೇಶಕ್ಕಾಗಿ, ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಸೇವಾ ನಿಯಮಗಳು) ವಿವಿಧ ಆಡಳಿತ ಇಲಾಖೆಗಳಿಂದ ನಿವೃತ್ತ ಅಧಿಕಾರಿಗಳ ಹೆಸರುಗಳನ್ನು ಪಡೆಯತಕ್ಕದ್ದು. ಹೆಸರುಗಳನ್ನು ಸೂಚಿಸುವಾಗ, ಆಡಳಿತ ಇಲಾಖೆಗಳು ಅಂತಹ ನಿವೃತ್ತ ಅಧಿಕಾರಿಗಳು ಇಲಾಖಾ ವಿಚಾರಣೆ ನಡೆಸುವುದರಲ್ಲಿ ಹೊಂದಿದ ಅನುಭವ: ಪ್ರಾವೀಣ್ಯತೆ ಹಾಗೂ ಅವರ ಪ್ರಾಮಾಣಿಕತೆಯನ್ನು ದೃಢೀಕರಿಸಿಕೊಳ್ಳತಕ್ಕದ್ದು. ಈ ರೀತಿ ಹೆಸರುಗಳು ಸ್ವೀಕರಿಸಿದ ನಂತರ ಪರಿಶೀಲಿಸಿ ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಒಂದು ವ್ಯಾಪಕ ಪಟ್ಟಿ (Master Panal) ಯನ್ನು ತಯಾರಿಸತಕ್ಕದ್ದು. ಈ ವ್ಯಾಪಕ ಪಟ್ಟಿಯಲ್ಲಿ ಕಾಲಕಾಲಕ್ಕೆ ಹೊಸ ಹೆಸರುಗಳನ್ನು ಸೇರಿಸಬಹುದು. ಯಾವುದೇ ಇಲಾಖೆ ನಿವೃತ್ತ ಅಧಿಕಾರಿಗಳ ಸೇವೆಯನ್ನು ವಿಚಾರಣಾಧಿಕಾರಿಯಾಗಿ, ಮಂಡನಾಧಿಕಾರಿಯಾಗಿ ಅಥವಾ ದೋಷರೋಪಣಾ ಪಟ್ಟಿಯನ್ನು ತಯಾರಿಸಲು, ಪಡೆಯಲು ಇಚ್ಛಿಸಿದಲ್ಲಿ ಈ ವ್ಯಾಪಕ ಪಟ್ಟಿಯಲ್ಲಿ ಸೇರಿರುವ ಯಾವುದೇ ನಿವೃತ್ತ ಅಧಿಕಾರಿಗಳ ಸೇವೆಯನ್ನು ಪಡೆಯಬಹುದು.
>
> (ಈ) ನಿವೃತ್ತ ಅಧಿಕಾರಿಯವರ ಹೆಸರನ್ನು ಪಟ್ಟಿ (Panal) ಯಲ್ಲಿ ಸೇರಿಸುವ ಮುಂಚೆ ಅವರ ಲಿಖಿತ ಒಪ್ಪಿಗೆಯನ್ನು ಪಡೆಯತಕ್ಕದ್ದು.

ಮೇಲ್ಕಂಡ ಸೂಚನೆಗಳಂತೆ ಎಲ್ಲಾ ಇಲಾಖಾ ಮುಖ್ಯಸ್ಥರು ತಮ್ಮ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿರುವ ಕ್ಷೇತ್ರ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ ಹಾಗೂ ವಿಚಾರಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಈಗ ವಿಚಾರಣಾಧಿಕಾರಿಗಳಾಗಿ ಕೆಲಸ ನಿರ್ವಹಿಸಲು ಇಚ್ಛೆಯಿರುವವರ ಹೆಸರು, ಮನೆ ವಿಳಾಸ, ದೂರವಾಣಿ ಸಂಖ್ಯೆ( ಸ್ಥಿರ ಹಾಗೂ ಮೊಬೈಲ್ ದೂರವಾಣಿ ಸಂಖ್ಯೆ) ಮತ್ತಿತರ ವಿವರಗಳೊಂದಿಗೆ ಅವರುಗಳ ಪ್ರಾಮಾಣಿಕತೆಯನ್ನು ದೃಢೀಕರಿಸಿ ಸಂಬಂಧಪಟ್ಟ ಸರ್ಕಾರದ ಪ್ರಧಾನ ಕಾರ್ಯದರ್ಶೀ/ಕಾರ್ಯದರ್ಶಿಯವರಿಗೆ ಕಳುಹಿಸಿ ಕೊಡುವುದು. ಆಯಾ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ಇಲಾಖಾ ಮುಖ್ಯಸ್ಥರುಗಳು ಕಳುಹಿಸಿದ ವಿವರಗಳನ್ನು ದೃಢೀಕರಿಸಿ ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ ಇಲಾಖೆ ಇವರಿಗೆ ಕಳುಹಿಸಿಕೊಡಬೇಕೆಂದು ಕೋರಿದೆ.

ವಿಚಾರಣಾಧಿಕಾರಿಗಳಾಗಿ ಕೆಲಸ ನಿರ್ವಹಿಸುವ ನಿವೃತ್ತ ಅಧಿಕಾರಿಗಳಿಗೆ ಈಗ ನಿವೃತ್ತ ನ್ಯಾಯಾಧೀಶರುಗಳು ವಿಚಾರಣಾಧಿಕಾರಿಗಳಾಗಿ ಕೆಲಸ ನಿರ್ವಹಿಸಿದಾಗ ಪಡೆಯುತ್ತಿರುವಂತೆಯೇ ಈ ಕೆಳಕಂಡ ಸಂಭಾವನೆಗಳನ್ನು ಪಾವತಿಸಲಾಗುವುದು.

(i) ದೋಷಾರೋಪಣಾ ಪಟ್ಟಿಯನ್ನು ತಯಾರಿಸಲು ಪ್ರತಿ ಪ್ರಕರಣಕ್ಕೆ ರೂ.3000/-
( ಮೂರು ಸಾವಿರ ರೂಪಾಯಿಗಳು) ಸಂಭಾವನೆ
(ii) ಪ್ರತಿ ವಿಚಾರಣೆಗೆ ರೂ. 15,000/- (ಹದಿನೈದು ಸಾವಿರ ರೂಪಾಯಿಗಳು) ಸಂಭಾವನೆ (ವಾಹನ ಭತ್ಯೆಯೂ ಸೇರಿರುತ್ತದೆ).

**ಪಿ.ಮಾರ್ಕಂಡೇಯ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯಾಗಿ ನೇಮಕಗೊಂಡ ಸರ್ಕಾರದ ಅಧಿಕಾರಿಗಳಿಗೆ ಸಂಭಾವನೆ ನೀಡುವ ಬಗ್ಗೆ.

******

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರನ್ವಯ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳನ್ನು ವಿಚಾರಣಾಧಿಕಾರಿಯಾಗಿ ನೇಮಿಸುವುದು ಒಂದು ಸಾಮಾನ್ಯ ವಾಡಿಕೆಯಾಗಿದೆ. ಆದರೆ ಸರ್ಕಾರಿ ಸೇವೆಯಲ್ಲಿರುವ ಅಧಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಿದಾಗ ಅವರಿಗೆ ಯಾವುದೇ ಸಂಭಾವನೆಯನ್ನು ನೀಡುತ್ತಿಲ್ಲ. ಸಾಮಾನ್ಯವಾಗಿ ಕ್ಲಿಷ್ಟವಾದ ವಿಚಾರಣೆಗಳನ್ನು ನಡೆಸಲು ನಿವೃತ್ತ ನ್ಯಾಯಾಧೀಶರಿಗೆ ವಹಿಸಲಾಗುತ್ತಿದ್ದರೂ, ಇತರ ಉಳಿದ ವಿಚಾರಣೆಗಳಲ್ಲಿ ಸರ್ಕಾರದ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡುತ್ತಿದ್ದು ಅಂತಹ ವಿಚಾರಣೆಗಳ ಸಂಖ್ಯೆಯು ಹೆಚ್ಚಾಗುತ್ತಿದೆ. ಯಾವುದೇ ಇಲಾಖಾ ವಿಚಾರಣೆಯಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅನುಸರಿಸುವ ಕ್ರಮ ಮತ್ತು ಅದಕ್ಕಾಗಿ ಪಡುವ ಕ್ರಮವು ಸರ್ಕಾರದ ಅಧಿಕಾರಿಗಳನ್ನೂ ಇಲಾಖಾ ವಿಚಾರಣಾಧಿಕಾರಿಯಾಗಿ ಮಾಡಿದಾಗಲು ಇರುತ್ತದೆ. ಸರ್ಕಾರದ ಅಧಿಕಾರಿಗಳಿಗೆ ಇಲಾಖಾ ವಿಚಾರಣೆ ನಡೆಸುವುದು ಒಂದು ಹೆಚ್ಚುವರಿ ಕರ್ತವ್ಯವಾಗಿರುತ್ತದೆ.

ಸರ್ಕಾರದ ಇಲಾಖಾ ವಿಚಾರಣೆಗಳಲ್ಲಿ, ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳನ್ನು ಮಂಡನಾಧಿಕಾರಿಗಳಾಗಿ ನೇಮಕ ಮಾಡಿದ ಪ್ರಸಂಗಗಳಲ್ಲಿ, ಅಂತಹವರಿಗೆ ಒಂದು ಸಿಟಿಂಗ್‌ಗೆ ರೂ.100/- (ಒಂದು ನೂರು ರೂಪಾಯಿ) ರಂತೆ ಸಂಭಾವನೆ ನೀಡಲಾಗುತ್ತಿದೆ. ಇಲಾಖಾ ವಿಚಾರಣಾಧಿಕಾರಿಗಳಾಗಿ ನೇಮಕವಾಗುವ ಸೇವೆಯಲ್ಲಿರುವ ಅಧಿಕಾರಿಗಳಿಗೆ ಯಾವುದೇ ಸಂಭಾವನೆ ನೀಡದಿರುವುದು ಸಮಂಜಸವಾಗುವುದಿಲ್ಲವೆಂಬುದನ್ನು ಸರ್ಕಾರ ಮನಗಾಣಲಾಗಿದೆ. ಅಲ್ಲದೇ ಯಾವುದೇ ಇಲಾಖಾ ವಿಚಾರಣೆಯಲ್ಲಿ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದರೆ, ಅವರಿಗೆ ಪ್ರೋತ್ಸಾಹಧನ ಅಥವಾ ಸಂಭಾವನೆ ನೀಡುವುದು ಸೂಕ್ತವೆಂದು ಪರಿಭಾವಿಸಲಾಗಿದೆ. ಈ ವಿಷಯವನ್ನು ಅಂದರೆ, ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಿದಾಗ ಅವರಿಗೆ ಸಂಭಾವನೆ ನೀಡುವ ಸಂಬಂಧವಾಗಿ ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 07 ಸೇಇವಿ 2012, ಬೆಂಗಳೂರು, ದಿನಾಂಕ: 03-02-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಸರ್ಕಾರಿ ನೌಕರರ ವಿರುದ್ಧ ಜರುಗಿಸುವ ಇಲಾಖಾ ವಿಚಾರಣೆಗಳಲ್ಲಿ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳನ್ನು ವಿಚಾರಣಾಧಕಾರಿಗಳನ್ನಾಗಿ ನೇಮಕ ಮಾಡಿದಾಗ ಮತ್ತು ನಿಗದಿಪಡಿಸಿರುವ ಅವಧಿಯಲ್ಲಿಯೇ ವಿಚಾರಣಾ ವರದಿಯನ್ನು ನೀಡುವ ಪ್ರಕರಣಗಳಲ್ಲಿ ಮಾತ್ರ ವಿಚಾರಣಾಧೀಕಾರಿಗಳಿಗೆ ಪ್ರೊತ್ಸಾಹಧನವಾಗಿ ಅಥವಾ ಸಂಭಾವನೆ ರೂಪದಲ್ಲಿ ರೂ.5000/- (ಐದು ಸಾವಿರ ರೂಪಾಯಿಗಳು) ನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ: 08-12-2011ರ ಟಿಪ್ಪಣಿ ಸಂಖ್ಯೆ: ಆಇ 1691/ಸೇ-1/11ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಪಿ.ಮಾರ್ಕಂಡೇಯ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂಧಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-2)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಜಂಟಿ ಇಲಾಖಾ ವಿಚಾರಣೆಗಳ ಪ್ರಕರಣಗಳಲ್ಲಿ ವಿಚಾರಣಾಧಿಕಾರಿಗಳಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಹೆಚ್ಚಿನ ಸಂಭಾವನೆ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ; ಸಿಆಸುಇ 3 ಸೇಇವಿ 1996, ದಿನಾಂಕ: 24.04.1998
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 6 ಸೇಇವಿ 2011, ದಿನಾಂಕ: 28.04.2011

**ಪ್ರಸ್ತಾವನೆ:-**

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರನ್ವಯ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧೀಕಾರಿಗಳಾಗಿ, ಮೇಲೆ(1)ರಲ್ಲಿ ಓದಲಾದ ದಿನಾಂಕ: 24.04.1998ರ ಸರ್ಕಾರಿ ಆದೇಶದನ್ವಯ ನೇಮಿಸಿಕೊಳ್ಳಬಹುದಾಗಿದೆ. ಈ ರೀತಿ ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ನೀಡುವ ಸಂಚಿತ ಸಂಭಾವನೆಯನ್ನು ಉಲ್ಲೇಖ(2)ರಲ್ಲಿ ಓದಲಾದ ದಿನಾಂಕ: 28.04.2011ರ ಸರ್ಕಾರಿ ಆದೇಶದಲ್ಲಿ ಪ್ರತಿ ವಿಚಾರಣೆಗೆ ವಾಹನಭತ್ಯೆಯು ಸೇರಿದಂತೆ, ರೂ. 15,000/-(ಹದಿನೈದು ಸಾವಿರ ರೂಪಾಯಿಗಳು) ನಿಗಧಿಪಡಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಜಂಟಿ ಇಲಾಖಾ ವಿಚಾರಣಾ ಪ್ರಕರಣಗಳಲ್ಲಿ ವಿಚಾರಣಾಧಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಸರ್ಕಾರವು ನಿಗಧಿಪಡಿಸಿದ ಸಂಭಾವನೆ ರೂ.15,000/-ಗಳನ್ನು ಪರಿಷ್ಕರಿಸುವಂತೆ ಕೋರುತ್ತಿರುವುದು ಮತ್ತು ಆರೋಪಿಗಳ ಸಂಖ್ಯೆ, ಪ್ರಕರಣದ ಗಹನತೆ ಇತ್ಯಾದಿಗಳನ್ನು ಉಲ್ಲೇಖಿಸಿ, ಹೆಚ್ಚಿನ ದರದಲ್ಲಿ ಸಂಭಾವನೆ ಪಾವತಿಸುವ ಕುರಿತು ಸರ್ಕಾರದ ವಿವಿಧ ಇಲಾಖೆಗಳಿಂದ ಕೋರಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಸ್ವೀಕೃತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಏಕವ್ಯಕ್ತಿ ಆರೋಪಿತರಾಗಿರುವ ಪ್ರಕರಣದಲ್ಲಿನ ವಿಚಾರಣೆ ಮತ್ತು ಜಂಟಿ ಇಲಾಖಾ ವಿಚಾರಣಾ ಪ್ರಕರಣದಲ್ಲಿನ ಪ್ರಕ್ರಿಯೆ ಒಂದೇ ತರಹದ್ದಾಗಿರುತ್ತದೆ. ಆದರೆ, ಜಂಟಿ ಇಲಾಖಾ ಪ್ರಕರಣಗಳಲ್ಲಿ ಅಪಾದಿತ ಅಧಿಕಾರಿ/ನೌಕರರ ಸಂಖ್ಯೆ ಪರಿಶೀಲಿಸಬೇಕಾದ ದಸ್ತಾವೇಜುಗಳು ಮತ್ತು ಸಾಕ್ಷಿಗಳ ಪ್ರಮಾಣಕ್ಕೆ ಅನುಗುಣವಾಗಿ ವಿಚಾರಣಾಧಿಕಾರಿಗಳು ಹೆಚ್ಚಿನ ವೆಚ್ಚ, ಸಮಯ ವ್ಯಯಿಸಬೇಕಾಗುತ್ತದೆ ಮತ್ತು ಪರಿಶ್ರಮ ಹೆಚ್ಚಾಗುತ್ತದೆಯೆಂಬ ಅಂಶಗಳನ್ನು ಪರಿಗಣಿಸಿ, ಇಂತಹ ಪ್ರಕರಣಗಳಲ್ಲಿ ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 45 ಸೇಇವಿ 2014, ದಿನಾಂಕ: 08.01.2015

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಈಗಾಗಲೇ ದಿನಾಂಕ: 28-04-2011ರ ಆದೇಶದಲ್ಲಿ ನಿಗಧಿಪಡಿಸಿರುವ ರೂ.15,000/-(ಹದಿನೈದು ಸಾವಿರ ರೂಪಾಯಿಗಳು)ಗಳ ಸಂಭಾವನೆ (ವಾಹನ ಭತ್ಯೆಯು ಸೇರಿದಂತೆ)ಯನ್ನು ಏಕವ್ಯಕ್ತಿ ಆರೋಪಿತರಾಗಿರುವ ಇಲಾಖಾ ವಿಚಾರಣೆ ಪ್ರಕರಣಗಳಿಗೆ ಅನ್ವಯಿಸುವಂತೆ

ಮುಂದುವರೆಸಲಾಗಿದೆ. ಜಂಟಿ ಇಲಾಖಾ ವಿಚಾರಣೆ ಪ್ರಕರಣಗಳಲ್ಲಿ ನೀಡಬಹುದಾದ ಸಂಭಾವನೆಯನ್ನು ವಾಹನ ಭತ್ಯೆಯು ಸೇರಿದಂತೆ ಈ ಕೆಳಗಿನಂತೆ ನಿಗಧಿಪಡಿಸಲಾಗಿದೆ.

ಅ) ಇಬ್ಬರಿಂದ ಐದು ಆರೋಪಿತ ವ್ಯಕ್ತಿಗಳಿರುವ ಜಂಟಿ ಇಲಾಖಾ ವಿಚಾರಣಾ ಪ್ರಕರಣಗಳಿಗೆ ರೂ.20,000/- (ಇಪ್ಪತ್ತು ಸಾವಿರ ರೂಪಾಯಿಗಳು)

ಆ) ಐದು ಆರೋಪಿ ವ್ಯಕ್ತಿಗಳಿಗಿಂತ ಹೆಚ್ಚಿನ ಆರೋಪಿತ ವ್ಯಕ್ತಿಗಳ ಜಂಟಿ ಇಲಾಖಾ ವಿಚಾರಣಾ ಪ್ರಕರಣಗಳಿಗೆ ರೂ.25,000/- (ಇಪ್ಪತ್ತೈದು ಸಾವಿರ ರೂಪಾಯಿಗಳು)

ಆರ್ಥಿಕ ಇಲಾಖೆಯು ದಿನಾಂಕ: 07.11.2014ರ ಟಿಪ್ಪಣಿ ಸಂಖ್ಯೆ: ಆಇ 865 ವೆಚ್ಚ-12/2014ರಲ್ಲಿ ನೀಡಿದ ಸಹಮತಿಯನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ|| ಮಂಗಳಜಿ.ಎಸ್.)
ಸರ್ಕಾರದಅಧೀನಕಾರ್ಯದರ್ಶಿ
ಸಿಬ್ಬಂದಿಮತ್ತುಆಡಳಿತಸುಧಾರಣೆಇಲಾಖೆ
(ಸೇವಾನಿಯಮಗಳು-1)

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಇಲಾಖಾ ವಿಚಾರಣೆಗಳಲ್ಲಿ ವಿಚಾರಣಾಧಿಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಹಾಗೂ ಸೇವೆಯಲ್ಲಿರುವ ಅಧಿಕಾರಿಗಳಿಗೆ ನೀಡಲಾಗುತ್ತಿರುವ ಸಂಭಾವನೆ ಮೊತ್ತ ಪರಿಷ್ಕರಣೆ ಬಗ್ಗೆ.

**ಓದಲಾಗಿದೆ**
1. ಸರ್ಕಾರದ ಆದೇಶ ಸಂಖ್ಯೆ; ಸಿಆಸುಇ 06 ಸೇಇವಿ 2011, ದಿನಾಂಕ: 28.04.2011.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 07 ಸೇಇವಿ 2012, ದಿನಾಂಕ: 03.02.2012
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 45 ಸೇಇವಿ 2014, ದಿನಾಂಕ: 08.01.2015.

**ಪ್ರಸ್ತಾವನೆ:-**

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಸರ್ಕಾರವು ಮೇಲೆ(1)ರಲ್ಲಿ ಓದಲಾದ ದಿನಾಂಕ: 28.04.2011ರ ಆದೇಶದಲ್ಲಿ ಪ್ರತಿ ವಿಚಾರಣೆಗೆ ರೂ.15,000/- (ಹದಿನೈದು ಸಾವಿರ ರೂಪಾಯಿಗಳು) ಸಂಭಾವನೆಯನ್ನು (ವಾಹನ ಭತ್ಯೆಯೂ ಸೇರಿದಂತೆ) ನಿಗಧಿಪಡಿಸಿದೆ. ಮೇಲೆ (3)ರಲ್ಲಿ ಓದಲಾದ ದಿನಾಂಕ: 08.01.2015ರ ಆದೇಶದಲ್ಲಿ ಈ ಸಂಭಾವನೆಯನ್ನು ಏಕವ್ಯಕ್ತಿ ಆರೋಪಿತರಾಗಿರುವ ಇಲಾಖಾ ವಿಚಾರಣೆ ಪ್ರಕರಣಗಳಿಗೆ ಅನ್ವಯಿಸುವಂತೆ ಮುಂದುವರೆಸಿ, ಜಂಟಿ ಇಲಾಖಾ ವಿಚಾರಣೆಗಳಿಗೆ ಪ್ರತ್ಯೇಕ ಸಂಭಾವನೆ ನಿಗಧಿಪಡಿಸಲಾಗಿದೆ.

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಸರ್ಕಾರಿ ನೌಕರರ ವಿರುದ್ಧ ಜರುಗಿಸುವ ಇಲಾಖಾ ವಿಚಾರಣೆಗಳಲ್ಲಿ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಿದಾಗ ಮತ್ತು ನಿಗಧಿಪಡಿಸಿರುವ ಅವಧಿಯಲ್ಲಿಯೇ ವಿಚಾರಣಾ ವರದಿಯನ್ನು ನೀಡುವ ಪ್ರಕರಣಗಳಲ್ಲಿ ಮಾತ್ರ ವಿಚಾರಣಾಧಿಕಾರಿಗಳಿಗೆ ಸರ್ಕಾರವು ಮೇಲೆ (2)ರಲ್ಲಿ ಓದಲಾದ ದಿನಾಂಕ: 03.02.2012ರ ಆದೇಶದಲ್ಲಿ ರೂ.5,000/-ಗಳ ಪ್ರೋತ್ಸಾಹಧನ/ಸಂಭಾವನೆಯನ್ನು ನಿಗಧಿಪಡಿಸಿದೆ.

ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳಾಗಿ ನೇಮಕವಾಗಿ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಪ್ರಸ್ತುತ ಇರುವ ಸಂಭಾವನೆಯು 2011ರಲ್ಲಿ ನಿಗಧಿಪಡಿಸಿರುವುದಾಗಿ ತಿಳಿಸಿ, ಈ ಸಂಭಾವನೆಯನ್ನು ಹೆಚ್ಚಳ ಮಾಡಲು ಬೇಡಿಕೆ ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ ವಿಚಾರಣಾಧಿಕಾರಿಗಳಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ನಿಗಧಿಪಡಿಸಿದ ಸಂಭಾವನೆ ಜೊತೆಗೆ ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳಿಗೆ ನೀಡಲಾಗುತ್ತಿರುವ ಪ್ರೋತ್ಸಾಹಧನವನ್ನು ಸಹ ಹೆಚ್ಚಿಸುವ ಬಗ್ಗೆ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 29 ಸೇಇವಿ 2017, ದಿನಾಂಕ: 02.02.2019**

ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ )ನಿಯಮಗಳು, 1957ರಡಿ ಮಾಡುವ ಇಲಾಖಾ

ವಿಚಾರಣೆಯಲ್ಲಿ ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಮತ್ತು ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಕೆಳಕಂಡ ಸಂಭಾವನೆ/ಪ್ರೋತ್ಸಾಹಧನಗಳನ್ನು ನಿಗಧಿಪಡಿಸಲಾಗಿದೆ.

(1) ಏಕವ್ಯಕ್ತಿ ಆರೋಪಿತರಾಗಿರುವ ಇಲಾಖಾ ವಿಚಾರಣೆ ಪ್ರಕರಣಗಳಲ್ಲಿ ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ರೂ.16,500/-ಗಳು (ಹದಿನಾರು ಸಾವಿರ ಐದು ನೂರು ರೂಪಾಯಿಗಳು) (ವಾಹನ ಭತ್ಯೆಯು ಸೇರಿದಂತೆ)

(2) ವಿಚಾರಣಾಧಿಕಾರಿಯಾಗಿ ನೇಮಕವಾದ ಮತ್ತು ನಿಗಧಿಪಡಿಸಿದ ಅವಧಿಯಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸಿದ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳಿಗೆ ರೂ. 5,500/-(ಐದು ಸಾವಿರ ಐದುದು ನೂರು ರೂಪಾಯಿಗಳು)

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ: 24.09.2018ರ ಟಿಪ್ಪಣಿ ಸಂಖ್ಯೆ: ಆಇ 738 ಸೇ-1/2018 ಮತ್ತು ದಿನಾಂಕ: 17.12.2018ರ ಟಿಪ್ಪಣಿ ಸಂಖ್ಯೆ: ಆಇ 996 ಸೇ-1/2018ರಲ್ಲಿ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎ.ವಿ.ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಇಲಾಖಾ ವಿಚಾರಣೆಗಳಲ್ಲಿ ವಿಚಾರಣಾಧಿಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಹಾಗೂ ಸೇವೆಯಲ್ಲಿರುವ ಅಧಿಕಾರಿಗಳಿಗೆ ನೀಡಲಾಗುತ್ತಿರುವ ಸಂಭಾವನೆ ಪರಿಷ್ಕರಣೆ ಬಗ್ಗೆ.

**ಓದಲಾಗಿದೆ**

1. ಸರ್ಕಾರದ ಆದೇಶ ಸಂಖ್ಯೆ; ಸಿಆಸುಇ 06 ಸೇಇವಿ 2011, ದಿನಾಂಕ: 28.04.2011.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 07 ಸೇಇವಿ 2012, ದಿನಾಂಕ: 03.02.2012
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 45 ಸೇಇವಿ 2014, ದಿನಾಂಕ: 08.01.2015.
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 29 ಸೇಇವಿ 2017, ದಿನಾಂಕ: 02.02.2019.

**ಪ್ರಸ್ತಾವನೆ:-**

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಸರ್ಕಾರವು ಮೇಲೆ(1)ರಲ್ಲಿ ಓದಲಾದ ದಿನಾಂಕ: 28.04.2011ರ ಆದೇಶದಲ್ಲಿ ಪ್ರತಿ ವಿಚಾರಣೆಗೆ ರೂ.15,000/-(ಹದಿನೈದು ಸಾವಿರ ರೂಪಾಯಿಗಳು) ಸಂಭಾವನೆಯನ್ನು (ವಾಹನ ಭತ್ಯೆಯೂ ಸೇರಿದಂತೆ) ನಿಗಧಿಪಡಿಸಿದೆ. ಮೇಲೆ (3)ರಲ್ಲಿ ಓದಲಾದ ದಿನಾಂಕ: 08.01.2015ರ ಆದೇಶದಲ್ಲಿ ಸದರಿ ಸಂಭಾವನೆಯನ್ನು ಏಕವ್ಯಕ್ತಿ ಆರೋಪಿತರಾಗಿರುವ ಇಲಾಖಾ ವಿಚಾರಣೆ ಪ್ರಕರಣಗಳಿಗೆ ಅನ್ವಯಿಸುವಂತೆ ಮುಂದುವರೆಸಿ, ಜಂಟಿ ಇಲಾಖಾ ವಿಚಾರಣೆಗಳಿಗೆ ಪ್ರತ್ಯೇಕ ಸಂಭಾವನೆ ನಿಗಧಿಪಡಿಸಲಾಗಿದೆ. ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಿದಾಗ ಮತ್ತು ನಿಗಧಿಪಡಿಸಿರುವ ಅವಧಿಯಲ್ಲಿಯೇ ವಿಚಾರಣಾ ವರದಿಯನ್ನು ನೀಡುವ ಪ್ರಕರಣಗಳಲ್ಲಿ ಮಾತ್ರ ಅಂತಹ ವಿಚಾರಣಾಧಿಕಾರಿಗಳಿಗೆ ಸರ್ಕಾರವು ಮೇಲೆ (2)ರಲ್ಲಿ ಓದಲಾದ ದಿನಾಂಕ: 03.02.2012ರ ಆದೇಶದಲ್ಲಿ ರೂ.5,000/-ಗಳ ಪ್ರೋತ್ಸಾಹಧನ/ಸಂಭಾವನೆಯನ್ನು ನಿಗಧಿಪಡಿಸಿದೆ.

ಮೇಲ್ಕಂಡ ಸಂಭಾವನೆಯನ್ನು ಹೆಚ್ಚಳ ಮಾಡಲು ಬೇಡಿಕೆ ಸ್ವೀಕೃತವಾದ ಹಿನ್ನೆಲೆಯಲ್ಲಿ ಸರ್ಕಾರವು ಮೇಲೆ(4)ರಲ್ಲಿ ಓದಲಾದ ದಿನಾಂಕ: 02.02.2019ರ ಆದೇಶದಲ್ಲಿ ಏಕವ್ಯಕ್ತಿ ಆರೋಪಿತರಾಗಿರುವ ಇಲಾಖಾ ವಿಚಾರಣೆ ಪ್ರಕರಣಗಳಲ್ಲಿ ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ರೂ.16,500/-ಗಳ (ಹದಿನಾರು ಸಾವಿರ ಐದು ನೂರು ರೂಪಾಯಿಗಳು) (ವಾಹನ ಭತ್ಯೆಯು ಸೇರಿದಂತೆ) ಸಂಭಾವನೆಯನ್ನು ಹಾಗೂ ವಿಚಾರಣಾಧಿಕಾರಿಯಾಗಿ ನೇಮಕವಾದ ಮತ್ತು ನಿಗಧೀಪಡಿಸಿದ ಅವಧೀಯಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸಿದ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳಿಗೆ ರೂ. 5,500/-ಗಳ (ಐದು ಸಾವಿರ ಐದು ನೂರು ರೂಪಾಯಿಗಳು) ಪ್ರೋತ್ಸಾಹಧನವನ್ನು ನಿಗಧಿಪಡಿಸಿದೆ.

ಕರ್ನಾಟಕ ರಾಜ್ಯ ನಿವೃತ್ತ ನ್ಯಾಯಾಧೀಶರ ಅಧಿಕಾರಿಗಳ ಸಂಘವು (ರಿ) ಸರ್ಕಾರಕ್ಕೆ ಮನವಿ ಸಲ್ಲಿಸಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯಾಗಿ ನೇಮಕಗೊಳ್ಳುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ನೀಡಲಾಗುತ್ತಿರುವ ಸಂಚಿತ ಸಂಭಾವನೆಯೊಂದಿಗೆ ದೈನಂದಿನ ವಿಚಾರಣೆಗಾಗಿ ಪ್ರತ್ಯೇಕವಾಗಿ ದಿನಭತ್ಯೆಯನ್ನು ನಿಗಧಿಪಡಿಸುವಂತೆ ಕೋರಿದ ಹಿನ್ನೆಲೆಯಲ್ಲಿ ಸರ್ಕಾರವು ಪ್ರಕರಣವನ್ನು ಮತ್ತೊಮ್ಮೆ ಪರಿಶೀಲಿಸಿದ ಸಂದರ್ಭದಲ್ಲಿ ಏಕವ್ಯಕ್ತಿಯ ವಿಚಾರಣೆಯು

ಸಾಮಾನ್ಯವಾಗಿ ಕನಿಷ್ಟ 5 ರಿಂದ 10 ಅಥವಾ 12 ಸಿಟ್ಟಿಂಗ್‌ಗಳನ್ನು ಹಾಗೂ ಜಂಟಿ ಇಲಾಖಾ ವಿಚಾರಣೆಯು ಕನಿಷ್ಟ 10 ರಿಂದ 15, 20, 25 ಸಿಟ್ಟಿಂಗ್‌ಗಳನ್ನು ಒಳಗೊಂಡಿರುತ್ತದೆ. ಆಪಾದನೆ ಮತ್ತು ಅದರಲ್ಲಿ ಒಳಗೊಂಡಿರುವ ಸಾಕ್ಷಿಗಳು, ಆ ವಿಚಾರಣೆಗೆ ಅಗತ್ಯವಾದ ದಾಖಲೆಗಳನ್ನು ಸಂಗ್ರಹಿಸುವ ಅಂಶಗಳು ಒಳಗೊಂಡಂತೆ ಪ್ರಕರಣವನ್ನು ಆದ್ಯಂತವಾಗಿ ಅಧ್ಯಯನ ಮಾಡಿ ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ಸಮಯ ಮತ್ತು ಪರಿಶ್ರಮದ ಅಗತ್ಯತೆ ಇರುತ್ತದೆ. ಇಂತಹ ಕೆಲಸಕ್ಕೆ ನ್ಯಾಯಯುತ ಹಾಗೂ ಸಮಂಜಸವಾದ ಮೊತ್ತವನ್ನು ನೀಡಬೇಕೆಂಬ ಅಂಶವನ್ನು ಪರಿಗಣಿಸಿ, ಸರ್ಕಾರವು ವಿಚಾರಣಾಧಿಕಾರಿಗಳಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ನಿಗದಿಪಡಿಸಿದ ಸಂಭಾವನೆ (ಜಂಟಿ ಇಲಾಖಾ ಪ್ರಕರಣಗಳಲ್ಲಿನ ಸಂಭಾವನೆಯು ಸೇರಿದಂತೆ) ಹಾಗೂ ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳನ್ನು ವಿಚಾರಣಾಧಿಕಾರಿಗಳಾಗಿ ನೇಮಕ ಮಾಡಿದಾಗ ನೀಡಲಾಗುತ್ತಿರುವ ಪ್ರೋತ್ಸಾಹಧನವನ್ನು ಹೆಚ್ಚಿಸುವುದು ಸೂಕ್ತವೆಂದು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 11 ಸೇಇವಿ 2019, ದಿನಾಂಕ: 24.04.2019**

ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ )ನಿಯಮಗಳು, 1957ರಡಿ ಕೈಗೊಳ್ಳುವ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಮತ್ತು ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಕೆಳಕಂಡ ಸಂಭಾವನೆ (ವಾಹನ ಭತ್ಯೆಯು ಸೇರಿದಂತೆ)/ಪ್ರೋತ್ಸಾಹಧನಗಳನ್ನು ನಿಗಧಿಪಡಿಸಲಾಗಿದೆ.

| **ಕ್ರ.ಸಂ.** | **ವಿಚಾರಣೆ ಸ್ವರೂಪ** | **ಪರಿಷ್ಕೃತ ಸಂಭಾವನೆ** |
|---|---|---|
| **(1) ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ** | | |
| (ಅ) | ಏಕ ವ್ಯಕ್ತಿ ಆರೋಪಿತರಾಗಿರುವ ಇಲಾಖಾ ವಿಚಾರಣೆಗಳಿಗೆ | ರೂ.30,000/- (ಮೂವತ್ತು ಸಾವಿರ ರೂಪಾಯಿಗಳು) |
| (ಆ) | ಇಬ್ಬರಿಂದ ಐದು ಆರೋಪಿತ ವ್ಯಕ್ತಿಗಳಿರುವ ಜಂಟಿ ಇಲಾಖಾ ವಿಚಾರಣೆ ಪ್ರಕರಣಗಳಿಗೆ | ರೂ.40,000/- (ನಲವತ್ತು ಸಾವಿರ ರೂಪಾಯಿಗಳು) |
| (ಇ) | ಐದು ಆರೋಪಿತ ವ್ಯಕ್ತಿಗಳಿಗಿಂತ ಹೆಚ್ಚಿನ ಆರೋಪಿತ ವ್ಯಕ್ತಿಗಳಿರುವ ಜಂಟಿ ಇಲಾಖಾ ವಿಚಾರಣೆ ಪ್ರಕರಣಗಳಿಗೆ | ರೂ.50,000/- (ಐವತ್ತು ಸಾವಿರ ರೂಪಾಯಿಗಳು) |
| (2) | ವಿಚಾರಣಾಧಿಕಾರಿಯಾಗಿ ನೇಮಕಾದ ಮತ್ತು ನಿಗಧಿಪಡಿಸಿದ ಅವದಿಯಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸಿದ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳಿಗೆ | ರೂ.11,000/- (ಹನ್ನೊಂದು ಸಾವಿರ ರೂಪಾಯಿಗಳು) |

ಈ ಆದೇಶವನ್ನು ಆರ್ಥಿಕ ಇಲಾಖೆಯು (ACS,FD.No.2639) ದಿನಾಂಕ: 02.04.2019ರಂದು ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಅದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎ.ವಿ.ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

**ಕರ್ನಾಟಕ ಸರ್ಕಾರದ ನಡವಳಿ**

ವಿಷಯ: ಇಲಾಖಾ ವಿಚಾರಣೆಗಳಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳಿಗೆ ವಿಳಂಬವಿಲ್ಲದೇ ಸಂಚಿತ ಸಂಭಾವನೆಯನ್ನು ಪಾವತಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 03 ಸೇಇವಿ 96, ದಿನಾಂಕ: 24.04.1998.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 11 ಸೇಇವಿ 2019, ದಿನಾಂಕ: 24.04.2019.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ದಿನಾಂಕ: 24.04.1998ರ ಆದೇಶದಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿಯಲ್ಲಿ ಮಾಡುವ ಇಲಾಖಾ ವಿಚಾರಣೆಗಳನ್ನು ನಿವೃತ್ತ ನ್ಯಾಯ್ಯಾಧೀಶರಿಗೆ ವಹಿಸುವ ಹಾಗೂ ಅವರಿಗೆ ಸಂಚಿತ ಸಂಭಾವನೆಯನ್ನು ಪಾವತಿಸುವ ಬಗ್ಗೆ ಕೆಲವು ಮಾರ್ಗಸೂಚನೆಗಳನ್ನು ನೀಡಲಾಗಿದೆ.

1) ಮೇಲೆ ಓದಲಾದ (2)ರ ದಿನಾಂಕ: 24.04.2019ರ ಆದೇಶದಲ್ಲಿ ಇಲಾಖಾ ವಿಚಾರಣೆಗಳಲ್ಲಿ ವಿಚಾರಣಾಧಿಕಾರಿಗಳಾಗಿ ನೇಮಕಗೊಳ್ಳುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಹಾಗೂ ಸೇವೆಯಲ್ಲಿರುವ ಅಧಿಕಾರಿಗಳಿಗೆ ನೀಡಲಾಗುತ್ತಿರುವ ಸಂಭಾವನೆಯನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಕ್ರ.ಸಂ. | ವಿಚಾರಣೆ ಸ್ವರೂಪ | ಪರಿಷ್ಕೃತ ಸಂಭಾವನೆ |
|---|---|---|
| (1) ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ | | |
| (ಅ) | ಏಕ ವ್ಯಕ್ತಿ ಆರೋಪಿತರಾಗಿರುವ ಇಲಾಖಾ ವಿಚಾರಣೆಗಳಿಗೆ | ರೂ.30,000/- |
| (ಆ) | ಇಬ್ಬರಿಂದ ಐದು ಆರೋಪಿತ ವ್ಯಕ್ತಿಗಳಿರುವ ಜಂಟಿ ಇಲಾಖಾ ವಿಚಾರಣೆ ಪ್ರಕರಣಗಳಿಗೆ | ರೂ.40,000/- |
| (ಇ) | ಐದು ಆರೋಪಿತ ವ್ಯಕ್ತಿಗಳಿಗಿಂತ ಹೆಚ್ಚಿನ ಆರೋಪಿತ ವ್ಯಕ್ತಿಗಳಿರುವ ಜಂಟಿ ಇಲಾಖಾ ವಿಚಾರಣೆ ಪ್ರಕರಣಗಳಿಗೆ | ರೂ.50,000/- |
| (2) | ವಿಚಾರಣಾಧಿಕಾರಿಯಾಗಿ ನೇಮಕಾದ ಮತ್ತು ನಿಗಧಿಪಡಿಸಿದ ಅವಧಿಯಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸಿದ ಸರ್ಕಾರದ ಸೇವೆಯಲ್ಲಿರುವ ಅಧಿಕಾರಿಗಳಿಗೆ | ರೂ.11,000/- |

3) ಸರ್ಕಾರಿ ನೌಕರರ ವಿರುದ್ಧದ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ನಿಗಧಿಪಡಿಸಿದ ಸಂಭಾವನೆಯನ್ನು ಮಂಜೂರು ಮಾಡುವ ಕುರಿತು ದಿನಾಂಕ: 24.04.1998ರ ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದ್ದರೂ ಸಹ ಕೆಲವು ಶಿಸ್ತುಪ್ರಾಧಿಕಾರಗಳು ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಂತಿಮ ವಿಚಾರಣಾ ವರದಿಯನ್ನು ಸಲ್ಲಿಸಿ ವರ್ಷಗಳೇ ಕಳೆದರೂ ಸಹ ಅವರಿಗೆ ಸಂಭಾವನೆ ಪಾವತಿಸಿರುವುದಿಲ್ಲವೆಂಬ ಅಂಶವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

**ಸರ್ಕಾರಿ ಆದೇಶ ಸಂಖ್ಯೆ: ಇ-ಸಿಆಸುಇ 2 ಸೇಇವಿ 2019**
**ಬೆಂಗಳೂರು ದಿನಾಂಕ: 16.07.2019.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ವಿಚಾರಣಾಧಿಕಾರಿಗಳಿಗೆ ಸಂಚಿತ ಸಂಭಾವನೆಯನ್ನು ಅತ್ಯಂತ ತ್ವರಿತವಾಗಿ ಪಾವತಿಸಲು ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

(ಎ) ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರಿಗೆ ಸಲ್ಲಿಸುವ ಸಂದರ್ಭದಲ್ಲಿ ಕೋರಿಕೆ ಪತ್ರದೊಂದಿಗೆ ತಮ್ಮ ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ಐ.ಎಫ್.ಎಸ್.ಸಿ.ಕೋಡ್, ಮುಂತಾದ ವಿವರಗಳನ್ನು ನೀಡುವುದು ಹಾಗೂ ಅದರ ಪ್ರತಿಯನ್ನು ವಿಚಾರಣಾ ವರದಿ ಸಲ್ಲಿಸಿದ ಮುಖಪುಟದೊಂದಿಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸುವುದು.

(ಬಿ) ವಿಚಾರಣಾಧಿಕಾರಿಯವರಿಗೆ ಸಲ್ಲಬೇಕಾದ ಸಂಚಿತ ಸಂಭಾವನೆಯನ್ನು ಇಲಾಖಾ ಮುಖ್ಯಸ್ಥರು ಮಾತ್ರ ಪಾವತಿಸತಕ್ಕದ್ದು. ಅಂದರೆ ಸಚಿವಾಲಯದ ಹಂತದಲ್ಲಿ ವಿಚಾರಣೆ ವಹಿಸಿದ್ದಲ್ಲಿ ಇಲಾಖಾ ಮುಖ್ಯಸ್ಥರು ಅಂದರೆ ಅಪರ ಮುಖ್ಯ ಕಾರ್ಯದರ್ಶಿಯವರು/ಪ್ರಧಾನ ಕಾರ್ಯದರ್ಶಿಯವರು /ಕಾರ್ಯದರ್ಶಿಯವರು ಸಂಚಿತ ಸಂಭಾವನೆಯನ್ನು ಪಾವತಿಸುವುದು. ಅದೇ ರೀತಿ ಸಚಿವಾಲಯ ಹಂತವನ್ನು ಹೊರತುಪಡಿಸಿ, ತದನಂತರದ ಹಂತಗಳಲ್ಲಿ ವಿಚಾರಣೆಗೆ ವಹಿಸಿದ್ದಲ್ಲಿ ಇಲಾಖಾ ಮುಖ್ಯಸ್ಥರು ಅಂದರೆ ಆಡಳಿತ ಇಲಾಖೆಯ ಆಯುಕ್ತರು/ನಿರ್ದೇಶಕರು/ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕಅಧಿಕಾರಿಗಳು/ಮುಖ್ಯ ಅಭಿಯಂತರರು ಇನ್ನಿತರೇ ಕ್ಷೇತ್ರ ಇಲಾಖೆಯ ಮುಖ್ಯಸ್ಥರು ಸಂಚಿತ ಸಂಭಾವನೆಯನ್ನು ಪಾವತಿಸುವುದು.

(ಸಿ) ವಿಚಾರಣಾಧಿಕಾರಿಯವರಿಗೆ ಪಾವತಿಸಲಾಗುವ ಸಂಭಾವನಾ ವೆಚ್ಚವನ್ನು ಸಂಬಂಧಿಸಿದ ಕಛೇರಿಯ **ಉಪ ಲೆಕ್ಕ ಶೀರ್ಷಿಕೆ:015 Subsidiary Expenses ರಡಿ ಭರಿಸತಕ್ಕದ್ದು.**

(ಡಿ) ಇಲಾಖಾ ವಿಚಾರಣೆಗೆ ವಹಿಸಿದ ಶಿಸ್ತು ಪ್ರಾಧಿಕಾರಿಯ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ವಿಚಾರಣಾಧಿಕಾರಿ ಸಲ್ಲಿಸಿದ ವಿಚಾರಣಾ ವರದಿ ಸ್ವೀಕರಿಸಿದ ನಂತರ ವಿಚಾರಣಾಧಿಕಾರಿಯವರಿಗೆ ಸಲ್ಲಬೇಕಾದ ಸಂಚಿತ ಸಂಭಾವನೆಯನ್ನು ವಿಳಂಬವಿಲ್ಲದೇ 15 ದಿನಗಳೊಳಗಾಗಿ ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾಗುವಂತೆ ಅಗತ್ಯ ಕ್ರಮವಹಿಸತಕ್ಕದ್ದು.

(ಇ) ಇನ್ನು ಮುಂದೆ ವಿಚಾರಣಾಧಿಕಾರಿಯಾಗಿ ನೇಮಿಸುವ ಆದೇಶದಲ್ಲಿ ಮೇಲಿನ ಅಂಶಗಳನ್ನು ಸೇರಿಸುವುದು.

ಮೇಲ್ಕಾಣಿಸಿದ ಸೂಚನೆಗಳನ್ನು ಎಲ್ಲಾ ಶಿಸ್ತು ಪ್ರಾಧಿಕಾರಗಳು ತಪ್ಪದೇ ಪಾಲಿಸತಕ್ಕದ್ದೆಂದು ತಿಳಿಸಲಾಗಿದೆ.

ಕರ್ನಾಟಕ ರಾಜ್ಯ ಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎ.ವಿ.ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)